## ನೈಸರ್ಗಿಕ ವೈಚಿತ್ರ್ಯ

ಕಳೆದ 26 ಆಗಸ್ಟ್ 2020 ರಂದು ನನ್ನ ಮಗಳ ಮದುವೆ ಶಾಸ್ತ್ರಕ್ಕಾಗಿ ಸಿಂಗರಿಸಿದ ತೆಂಗಿನಕಾಯಿಗಳನ್ನು ಮದುವೆ ಮುಗಿದ ತರುವಾಯ ಮುಂದೆ ನಮ್ಮ ನೆಂಟರ ಮದುವೆಗೆ ಕೊಡಬಹುದು ಎಂದು ಭಾವಿಸಿ ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ದೇವರ ಕೋಣೆಯ ಕಪಾಟಿನಲ್ಲಿ ಭದ್ರವಾಗಿ ಇಟ್ಟಿದ್ದೆವು. ಮದುವೆ ತಯಾರಿಯಲ್ಲಿದ್ದ ನಮ್ಮ ನೆಂಟರ ಕಡೆಯವರು ಆಹ್ವಾನ ಪತ್ರಿಕೆ ನೀಡಲು ಬಂದಾಗ ಕಪಾಟಿನಲ್ಲಿದ್ದ ಕವರ್ ನೋಡಿದೆವು. ಅಷ್ಟರಲ್ಲಿ ಎಂಟು ತಿಂಗಳು ಕಳೆದಿದ್ದವು. ಕಪಾಟು ತಗೆದ ನನ್ನ ಪತ್ನಿ ಹೌಹಾರಿ ಏನೋ ಹಾವಿನ ತರಹ ಇದೆ ಎಂದು ಕೂಗಿದಳು. ಪ್ಲಾಸ್ಟಿಕ್ ಕವರನ್ನು ಸೀಳಿ ಮರಿ ಹಾವಿನ ಆಕೃತಿ ಹೊರ ಗೋಚರಿಸುತ್ತಿತ್ತು. ಬ್ಯಾಟರಿ ಬಿಟ್ಟು ನೋಡಿದೆವು ಅದು ಹಾವಾಗಿರಲಿಲ್ಲ. ಸಿಂಗರಿಸಿದ ನಾಲ್ಕು ತೆಂಗಿನ ಕಾಯಿಗಳೂ ಚಿಗುರೊಡೆದಿದ್ದವು. ನೈಸರ್ಗಿಕವಾಗಿ ಚಂದದಿ ಸಿಂಗರಿಸಿಕೊಂಡಿದ್ದವು ತಮ್ಮನ್ನು ಬಂಧಿಗಳಾಗಿ ಮಾಡದಿರಲೆಂದು ನವ ದಂಪತಿಗಳ ನವ ಜೀವನದಂತೆ ಚಿಗುರೊಡೆದಿತ್ತು! ನೈಸರ್ಗಿಕ ವೈಚಿತ್ರ್ಯದ ಮಹಿಮೆಯೇ ಸರಿ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ





## ಶ್.. ಹುಲಿ ಕಾಯ್ತಿದೆ

ಅಕ್ಕಿ, ರಾಗಿ, ಗೋಧಿ, ಬೇಳೆಕಾಳುಗಳು, ಮೆಣಸಿನಕಾಯಿ ಮುಂತಾದ ಆಹಾರ ಪದಾರ್ಥಗಳಿಗೆ ಹುಳು ಬೀಳದಂತೆ ಮಾಡಲು ಬಿಸಿಲಿಗೆ ಒಣಗಿಸಿ ಅವುಗಳ ತೇವಾಂಶವನ್ನು ಬತ್ತಿಸಲಾಗುತ್ತದೆ. ಹೀಗೆ ಒಣ ಹಾಕಿರುವ ಬೇಳೆ ಕಾಳುಗಳನ್ನು ಕಂಡರೆ ಕಾಗೆಗಳು ಬಿಡುವುದುಂಟೆ? ಕಾ ಕಾ ಎಂದು ತನ್ನ ಬಳಗವನ್ನೆಲ್ಲಾ ಕರೆದು ಬಿಡುತ್ತವೆ. ಕಾಗೆಗಳಿಂದ ಕಾಪಾಡಲು ಯಾರಾದರೊಬ್ಬರು ಕಾವಲು ಕುಳಿತುಕೊಳ್ಳಬೇಕಾಗುತ್ತದೆ. ಈ ಶ್ರಮದಿಂದ ಪಾರಾಗಲು ಕೆಲವರು ಹುಲಿ ಗೊಂಬೆಗಳನ್ನು ಬಳಸುತ್ತಿದ್ದಾರೆ. ಜಾಣ ಕಾಗೆ ಮಾತ್ರ ಮೋಸ ಹೋಗಿ ಹತ್ತಿರವೂ ಸುಳಿಯುವುದಿಲ್ಲವಂತೆ.

—ಎಸ್.ಎನ್. ಅಶೋಕಕುಮಾರ್, ಶ್ರವಣಬೆಳಗೊಳ

## ಮುಳುಗಡೆಯ ಸ್ತಬ್ಧ ಚಿತ್ರ

ಕೆಲವು ವರ್ಷಗಳ ಹಿಂದೆ ಗಾಜನೂರಿನ ತುಂಗಾ ಅಣೆಕಟ್ಟಿನ ಗಾತ್ರವನ್ನು ಹಿಗ್ಗಿಸಿ ಸಾವಿರಾರು ಎಕರೆ ಅರಣ್ಯ ಪ್ರದೇಶ ಮುಳುಗಡೆಯಾಯಿತು. ತೀರ್ಥಹಳ್ಳಿಯಿಂದ ಶಿವಮೊಗ್ಗಕ್ಕೆ ತೆರಳುವಾಗ ಮಂಡಗದ್ದೆ ದಾಟುತ್ತಿದ್ದಂತೆಯೇ 17 ನೇ ಮೈಲಿಕಲ್ಲು ಎಂಬ ಪುಟ್ಟ ಹಳ್ಳಿಯ ಸಮೀಪ ತುಂಗಾನದಿಯ ಹರಿವು ರಸ್ತೆ ಸಮೀಪಕ್ಕೆ ಬಂದು ನಿಂತಿದೆ. ನದಿಯ ಆಜುಬಾಜಿಗೆ ಮಣ್ಣು ತುಂಬಿ ರಸ್ತೆಯನ್ನು ಎತ್ತರಿಸಿ ಸಂಚಾರಕ್ಕೆ ನೆರೆಯಿಂದ ಹಾನಿಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಪ್ರದೇಶ ಮುಳುಗಡೆಯ ಪರಿಣಾಮ ತುಂಗಾ ನದಿ ಹಿನ್ನೀರಿನಲ್ಲಿ ಒಂಟಿ ಕಾಲಿನಲ್ಲಿ ತಪಸ್ಸು ಮಾಡುತ್ತಿರುವಂತೆ ಕಾಣುವ ಅಳಿದುಳಿದ ಒಣಗಿದ ವೃಕ್ಷಗಳು, ಬುಟ್ಟಿ ದೋಣಿಯಲ್ಲಿ ಕುಳಿತು ಹುಟ್ಟುಹಾಕುತ್ತಾ ಮೀನು ಹಿಡಿಯುವವರ ದೃಶ್ಯಗಳು ಈ ದಾರಿಯಲ್ಲಿ ಸಾಗುವ ಪ್ರವಾಸಿಗರ ಕ್ಯಾಮೆರಾಗಳಿಗೆ ಭರಪೂರ ಆಹಾರವನ್ನೂ ಒದಗಿಸುತ್ತಿವೆ.

ಮತ್ತೊಂದು ಕೋನದಲ್ಲಿ ನೋಡಿದಾಗ ಅರಣ್ಯ ನಾಶದ ಪರಿಣಾಮವಾಗಿ ತಾಪಮಾನ ಹೆಚ್ಚಳ, ಅಕಾಲಿಕ ನೆರೆ, ಬರ, ಕಂಡೂ ಕೇಳರಿಯದ ಸಾಂಕ್ರಾಮಿಕ ಬಾಧೆಗಳ ಸಂಕಷ್ಟಗಳನ್ನು ಎದುರಿಸುತ್ತಿದ್ದರೂ ಕೊನೆ ಮೊದಲಿಲ್ಲದ ಅಭಿವೃದ್ಧಿಯೆಂಬ ಮರೀಚಿಕೆಯ ಬೆನ್ನು ಹತ್ತಿ ಹೊರಟಿರುವ ಮನುಷ್ಯರ ಕ್ರೌರ್ಯದ ವಿರುದ್ಧ ಏನೂ ಮಾಡಲಾಗದೆ ಅಸಹಾಯಕತೆಯಿಂದ ನಿಟ್ಟುಸಿರುಗೈಯುತ್ತಿರುವ ಸ್ತಬ್ಧ ಚಿತ್ರಗಳಂತೆ ಗೋಚರಿಸುತ್ತದೆ.

—ಕೆ. ರಾಮಕೃಷ್ಣ ಸೀಬಿನಕೆರೆ, ತೀರ್ಥಹಳ್ಳಿ

